ಕರ್ನಾಟಕ ಸರ್ಕಾರ
(ಪಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ 57)
ನಮೂನೆ ಸಂಖ್ಯೆ 4

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**
**ಸೆಷನ್ಸ್ ಕೇಸ್ ನಂಬರ್ : 235/2022**

**ಪ್ರಾಸಾ- 1 ಚಾಸಾ- 1**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಚಂದ್ರಪ್ಪ |
| ತಂದೆಯ ಹೆಸರುಃ | : | ಶ್ರೀಕಂಠಪ್ಪ |
| ವಯಸ್ಸುಃ | : | 56 ವರ್ಷ |
| ಉದ್ಯೋಗಃ | : | ವ್ಯವಸಾಯ |
| ವಾಸ | : | ಮಾಡಾಳು ಗ್ರಾಮ |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 14-07-2026:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ಅಭಿಯೋಜಕರಿಂದಃ**

ನನಗೆ ಚಾಸಾ-2 ರಿಂದ 6ರವರ ಪರಿಚಯವಿಲ್ಲ. ನನಗೆ ಚಿಕ್ಕಗೊಂಡನಹಳ್ಳಿ ಗ್ರಾಮದಲ್ಲಿ ಸ.ನಂ.122/1ರಲ್ಲಿ 1ಎಕರೆ ಜಮೀನು ಇರುತ್ತದೆ. ಈಗ್ಗೆ 3 ವರ್ಷಗಳ ಹಿಂದೆ ನನ್ನ ಹೊಲದಿಂದ ಸ್ವಲ್ಪ ದೂರದಲ್ಲಿ ಕೂಲಿ ಕೆಲಸಕ್ಕೆ ಹೋಗಿದ್ದೆನು. ಆಗ ನನಗೆ ರೇವಣ್ಣ ಎಂಬುವವರು ಸಂಜೆ 5 ಗಂಟೆ ಸಮಯದಲ್ಲಿ ಕರೆ ಮಾಡಿ ನಮ್ಮ ಜಮೀನಿನಲ್ಲಿ ಯಾವುದೋ ಗಂಡಸಿನ ಹೆಣವನ್ನು ಸುಟ್ಟುಹಾಕಿದ್ದಾರೆಂದು ತಿಳಿಸಿದರು. ಆಗ ನಾನು ಕಣಕಟ್ಟೆ ಪೊಲೀಸರಿಗೆ ಫೋನು ಮಾಡಿದೆನು. ಪೊಲೀಸರು ಸ್ಥಳಕ್ಕೆ ಬಂದರು. ನಾನು ಅಲ್ಲಿಗೆ ಹೋದೆನು. ಅಲ್ಲಿ ಅರ್ಧಂಬರ್ಧ ಸುಟ್ಟ ಹೆಣ ಕಂಡುಬಂತು. ಅದು ಯಾರ ಶವ ಎಂದು ಗೊತ್ತಾಗಲಿಲ್ಲ. ಪೊಲೀಸರು ಬರೆದುಕೂಂಡು ನನ್ನ ಸಹಿ ಪಡೆದುಕೊಂಡಿದ್ದರು. ಆ ಸಹಿ ನೋಡಿದರೆ ಗುರುತಿಸುತ್ತೇನೆ. ಈಗ ತೋರಿಸಿದ ದಾಖಲೆಯಲ್ಲಿರುವ ರುಜು ನನ್ನದೆ. ಸದರಿ ದಾಖಲೆಯನ್ನು ನಿಪಿ-1 ಎಂದು ಸಾಕ್ಷಿಯ ರುಜುವನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

2.ಪೊಲೀಸರು ಸ್ಥಳದಲ್ಲಿ ಪರಿಶೀಲನೆ ಮಾಡಿ ಬೂದಿಯನ್ನು ಮತ್ತು ಹೆಣವನ್ನು ಟೆಂಪೋದಲ್ಲಿ

ಹಾಕಿಕೊಂಡು ಹೋದರು. ಈಗ ತೋರಿಸಿದ ಇನ್ನೊಂದು ದಾಖಲೆಯಲ್ಲಿರುವ ರುಜು ನನ್ನದೆ. ಸದರಿ ದಾಖಲೆಯನ್ನು ನಿಪಿ-2 ಎಂದು ಸಾಕ್ಷಿಯ ರುಜುವನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಅದು ಬಿಟ್ಟರೆ ಬೇರೇನೂ ಪೊಲೀಸರು ಸ್ಥಳದಿಂದ ತೆಗೆದುಕೊಂಡು ಹೋಗಲಿಲ್ಲ. ಆ ಹೆಣ ಇದ್ದ ಸ್ಥಳದ ಫೋಟೋ ನೋಡಿದರೆ ಗುರುತಿಸುತ್ತೇನೆ. ಈಗ ಕಂಡುಬರುತ್ತಿರುವುದು ಅದೇ ಫೋಟೋ ಆಗಿರುತ್ತದೆ. ಒಟ್ಟು 8 ಫೋಟೋಗಳಿದ್ದು ಇವುಗಳನ್ನು ನಿಪಿ-3 ರಿಂದ ನಿಪಿ- 10 ಎಂದು ಗುರುತಿಸಲಾಯಿತು.

3.ಈಗ ತೋರಿಸಿದ ಇನ್ನೊಂದು ದಾಖಲೆಯಲ್ಲಿರುವ ರುಜು ಸಹ ನನ್ನದೆ. ಸದರಿ ದಾಖಲೆಯನ್ನು ನಿಪಿ-11 ಎಂದು ಸಾಕ್ಷಿಯ ರುಜುವನ್ನು ನಿಪಿ-11(ಎ) ಎಂದು ಗುರುತಿಸಲಾಯಿತು. ಈ ಸಹಿಯನ್ನು ಹೆಣ ಸಿಕ್ಕಿದ ಸ್ಥಳದಲ್ಲಿ ಹಾಕಿರುತ್ತೇನೆ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಮುಂದುವರೆದ ಮುಖ್ಯವಿಚಾರಣೆಗೆ ಸಮಯ ಕೋರಿದ್ದು ಸಮಯ ನೀಡಲಾಗಿದೆ)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**

**ಹಾಸನ.**